Sri V. SRINIVASA SHETTY.—Sir, I rise to a point of order. We are all arguing without reading rule 11. I should like to read the rule itself :

" When by reason of illness or absence from India or for any other sufficient cause, the Speaker is unable to exercise any of his powers or discharge any of his functions, he may by order in writing delegate to the Deputy Speaker such of his powers and functions as he may deem fit. He may likewise revoke any such delegation. "

What my friend wanted to know was, whether the Speaker has delegated in writing under rule 11, to the Deputy Speaker. This is all what the House is interested to know.

Sri B. D. JATTI.—If the Hon'ble Member reads article 180 (2) of the Constitution, he will understand it.

" During the absence of the Speaker from any sitting of the Assembly the Deputy Speaker or, if he is also absent, such person as may be determined by the rules of procedure of the Assembly, or, if no such person is present, such other person as may be determined by the Assembly, shall act as Speaker. "

This is very clear ; there is no doubt about it.

ಶ್ರೀ ಕೆ. ಪಿ. ರೇವಣ ಸಿದ್ದಪ್ಪ.—ಅಧ್ಯಕ್ಷರೇ ತಾವು ಶ್ರೀ ರಾಜಯ್ಯಶೆಟ್ಟರಿಂದ ಯಾವು ದಾದರೂ ರೆಕಾರ್ಡುಗಳನ್ನು ಕೇಳಿ ತೆಗೆದುಕೊಳ್ಳುವುದಕ್ಕೆ ತಮಗೆ ಅವಕಾಶ ಇರುತ್ತದೆಯೇ ?

NON-OFFICIAL RESOLUTION *RE* : CHANGING THE PRESENT NAME OF MYSORE STATE TO KARNATAKA.

Motion to adjourn consideration to the next session.

Sri K. S. SURYANARAYANA RAO.—Sir, under rule 277 of the Rules of procedure and sub-rule (1) of rule 13,

I beg to move : " That the debate on the resolution be adjourned to the next session. "

Mr. DEPUTY SPEAKER.—Motion moved :

" That the debate on the resolution be adjourned to the next session. "

†Sri V. SRINIVASA SHETTY (Coondapur).—Sir, I am really astounded at the methods and tactics used by the other side concerning this resolution. Now what is the real motive behind all this, I am unable to understand. The resolution is moved by a member belonging to the other side. This is policy for which most of us have committed. Of course, there are differences of opinion. But, most of us have committed to this policy. This is a resolution which is coming for the imteenth time before this House. The Members of the ruling party and the cabinet are in doll-drums. They have not either made up their minds

(Sri V. SRINIVASA SHETTY)

or they are incapacitated to make up their mind or they are unable to make up their mind. There is division among themselves. Every time, for the last three years, this matter come up, they want to shirk the responsibility. They are running away from this problem. They are afraid to look at the problem. I for one, would be very glad if this problem is burried. Even, if the State is called as Mysore or Karnatak, I for one, would not weep for it. If, by a majority, it is passed that it should be called as Karnatak, I will be glad or if it is decided to be called as Mysore, I will not be very sorry personally. Large majority of people who come from the area from where the Chief Minister comes and most of the Ministers come, are bent upon calling the State as Karnataka. People from my area also are all in all to call the State as Karnataka. In the face of it there is a psychological, sentimental wish that this State should be named Karnataka. Why is the Government affraid of taking a decision in the matter. I would like to ask what great thing is going to happen between this session and the next session. I do not know, but rumours have it that we are going to meet in July. Any how, under the Constitution, within the next six months we have to meet. I will submit that the ruling party will not be meeting here before that date. The ruling party will be dispensing tomorrow. They will not or take decission. What will happen within this interrugnum. This tacticks is not at all decent or it is in consistence with the degnity of the Members of this House. I make humble request that we discuss this matter if at all, today, or if discussion is necessary, I am not one of those who feel that anything will be served by further discussion, Let us.....

Sri C. M. ARUMUGHAM. -It is a question of convincing others.

Sri V. SRINIVASA SHETTY.—Who is going to be convinced or converted ? I doubt. It is as a plain as daylight. I would only say that we are not being sincere to ourselves if we go on putting off this question day by day, session after session. Probably the ruling party does not want to take a decision before the next elections. Do you mean to say that the people will understand your tactics. They know it very well. For four years we talked the matter. Now you want to leave this heritage to our successors. Is it fair ? After it is a simple matter and it is dear to the hearts of many of us. I sincerely and honestly oppose the motion.

Sri G. VENKATAI GOWDA.—I endorse the point advanced by my friend. This resolution has been comming in any one way or the other for the last four years. We have had sufficient time to discuss it. It is a simple matter. It is better that some decision is taken today or tomorrow. I do not understand the significance of having it carried over the next session. If the party is able to arrive at a decision in the next session why should it not do it even now. I sincerly oppose the motion.

†ಶ್ರೀ ಎಚ್. ಜಿ. ನರಸಿಂಹೇಗೌಡ (ಶ್ರವಣಬೆಳಗೊಳ).—ಸ್ವಾಮಿ, ಶ್ರೀಮಾನ್ ನೂರ್ಯ ನಾರಾಯಣರಾಯರು ತಂದಿರುವ ಸೂಚನೆ ಸಾಧುವಾಗಿದೆ. ಈ ನಿರ್ಣಯ ನಾಲ್ಕು ವರ್ಷ ಗಳಿಂದ ಬರುತ್ತಿರುವುದರ ಪರಿಣಾಮವೇನಾಗಿದೆ ಎನ್ನುವುದನ್ನು ನಾವು ಖಚಿತವಾಗಿ ತಿಳಿದು ಕೊಂಡಿದ್ದೇವೆ. ಈ ನಿರ್ಣಯಕ್ಕೆ ಬಹುಮತವಿದೆಯೆಂದು ಕೆಲವರು ಹೇಳುತ್ತಾರೆ. ಬಹು ಮತ ಖಂಡಿತವಾಗಿಯೂ ಇಲ್ಲ. ಈ ನಿರ್ಣಯದ ಮೇಲಿನ ಚರ್ಚೆಯನ್ನು ಮುಂದಕ್ಕೆ ಹಾಕು ವುದರಲ್ಲಿ ಅರ್ಥವಿದೆ. ಹೆಸರನ್ನು ಬದಲಾಯಿಸುವುದು ಸಾಮಾನ್ಯವಾಗಿ ಅಷ್ಟು ಜಾಗ್ರತೆ ಆಗ ತಕ್ಕ ವಿಚಾರವಲ್ಲ. ಒಂದು ಪಕ್ಷ ಕಾಂಗ್ರೆಸ್‌ನವರಿಗೆ ಬಹುಮತವಿದೆಯೆಂದು ಹೆಸರು ಬದಲಾ ಯಿಸುವುದನ್ನು ಒಪ್ಪಿಕೊಂಡರೂ, ಅದು ಪಾರ್ಲಿಮೆಂಟಿನಲ್ಲಿ ತೀರ್ಮಾನವಾಗಬೇಕಾಗಿದೆ. ಅಲ್ಲಿ ಹೆಸರಿನ ಬದಲಾವಣೆಯಾಗಕೂಡದು ಎಂದು ಹೇಳುವ ಅವಕಾಶವನ್ನು ಉಪಯೋಗಿಸಿಕೊಳ್ಳು ತ್ತೇವೆ. ಈ ವಿಚಾರದಲ್ಲಿ ಚರ್ಚೆ ಬೇಡ. ಎರಡು ಕಡೆಯೂ ಶಾಂತವಾಗಿರಲಿ ಎಂದು ಇದರ ಮೇಲಿನ ಚರ್ಚೆಯನ್ನು ಮುಂದಕ್ಕೆ ಹಾಕಬೇಕೆಂದು ಹೇಳಿದ್ದಾರೆ. ಈ ತರಹ ನಿರ್ಣಯವನ್ನು ಚರ್ಚೆಗೆ ತರುವುದೇ ಬೇಡ ; ಒಂದು ವೇಳೆ ಮುಂದಿನ ಅಧಿವೇಶನದಲ್ಲಿ ಬಂದರೂ ಕೂಡ ಅದನ್ನು defer ಮಾಡಿಸಬೇಕು. ಎಂದು ಹೇಳುತ್ತೇನೆ.

†ಶ್ರೀ ಕೆ. ಪಿ. ರೇವಣಸಿದ್ದಪ್ಪ (ತಿಪಟೂರು).—ಅಧ್ಯಕ್ಷರೇ, ನಮ್ಮಾರು ನಾಲ್ಕು ವರ್ಷ ದಿಂದ ಬಹು ಮುಖ್ಯವಾದ ನಿರ್ಣಯ ಸಭೆಯ ಮುಂದೆ ಬರುತ್ತಿದೆ. ಇದರ ವಿಷಯದಲ್ಲಿ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಹಿಂಜರಿಯುತ್ತಿರುವ ಸರ್ಕಾರ ರಾಜ್ಯವಾಳುವುದಕ್ಕೆ ಸಾಧ್ಯವೇ ಎಂಬುದನ್ನು ಅಧ್ಯಕ್ಷರ ಗಮನಕ್ಕೆ ತರುತ್ತಿದ್ದೇನೆ.

ಎರಡನೆಯದಾಗಿ 40 ಜನ ಒಂದು ಅವಿಶ್ವಾಸ ನಿರ್ಣಯಕ್ಕೆ ಸಹಿ ಹಾಕಿದರೆ, ಮುಂತ್ರಿ ಮಂಡಲ ಹೋಗಬೇಕು ಎನ್ನುವ ವಿಷಯವನ್ನು ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಡ ತಕ್ಕ ಸಂದರ್ಭವಿದೆ. ಈಗ ಸಭೆಯ ಮುಂದೆ ಮಂಡಿಸಲ್ಪಟ್ಟಿರುವ ನಿರ್ಣಯ 40 ಜನರಿಂದ ಬಂದಿದೆ. ಇದೂ ಅಲ್ಲದೆ ಇದು ಪ್ರತಿಯೊಂದು ಅಧಿವೇಶನದಲ್ಲಿಯೂ ಸಾಕಷ್ಟು ಚರ್ಚೆಯಾಗಿ ಕವಿ ಬೋರಿಟ್ಟು ಹೋಗಿದೆ. ಏನೋ ಒಂದು ಉದ್ದೇಶವನ್ನು ಕಾಂಗ್ರೆಸ್ ಸರ್ಕಾರ ಮನಸ್ಸಿನಲ್ಲಿಟ್ಟು ಕೊಂಡು ಇದನ್ನು ಮುಂದೂಡುತ್ತಿದ್ದಾರೆಂದು ಜನ ಹೇಳಿಕೊಳ್ಳುತ್ತಾರೆ. ಈ ನಿರ್ಣಯ ಸಾಕಷ್ಟು ಚರ್ಚೆಯಾಗಿರುವುದರಿಂದ ಇದನ್ನು ತಕ್ಷಣ ಓಟಿಗೆ ಹಾಕಬೇಕು. ಅನ್ಯಾಯವಾಗಿ ಜನರ ದುಡ್ಡನ್ನು ವ್ಯಯ ಮಾಡಬೇಡಿ ಎಂದು ಅಧ್ಯಕ್ಷರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಜಿ. ಎನ್. ಪುಟ್ಟಣ್ಣ (ತುಮಕೂರು).—ಸ್ವಾಮಿ, ಹೊರಗಡೆ ಜನಗಳು ಆಡತಕ್ಕ ಮಾತುಗಳನ್ನು ಕೇಳಿದರೆ ಮನಸ್ಸಿಗೆ ಬಹಳ ಸಂಕಟವಾಗುತ್ತದೆ. ಅಸೆಂಬ್ಲಿಯಲ್ಲಿ ಒಂದು ದಿವಸದಲ್ಲಿ ಆಗತಕ್ಕ ಕೆಲಸವನ್ನು ನಾಲ್ಕು ದಿವಸ ಮಾಡಿ ವಿಪರೀತ ಖರ್ಚಾಗುತ್ತದೆ ಎಂದು ಜನ ಆಡಿಕೊಳ್ಳುವುದನ್ನು ಕೇಳಿ ತರೆ ಬಗ್ಗಿಸಬೇಕಾಗುತ್ತದೆ. ಈ ನಿರ್ಣಯ ಮೂರು ನಾಲ್ಕು ವರ್ಷಗಳ ರಾಗಾಯ್ತು. ಈ ಸಭೆಯ ಮುಂದೆ ಬಂದು ''ಹಾಡಿದ್ದೇ ಹಾಡೋ ಕಿನಬಾಯಿ ದಾಸ'' ಎಂದು ಹೇಳುವಂತೆ ಆಗಿದೆ. ನಮ್ಮ ರಾಜ್ಯಕ್ಕೆ ಮೈಸೂರು ಎಂದು ಹೆಸರು ಇರ ಬೇಕೋ ಅಥವಾ ಕರ್ನಾಟಕ ಎಂದು ಇರಬೇಕೋ ಎಂಬ ವಿಚಾರದಲ್ಲಿ ಸರ್ಕಾರದವರು ಒಂದು ತೀರ್ಮಾನಕ್ಕೆ ಬಂದರೆ ಒಳ್ಳೆಯದು. ಯಾವುದಾದರೂ ಹೆಸರಿನಿಂದ ಕರೆಯಿರಿ ಆದರೆ ಒಂದು ತೀರ್ಮಾನಕ್ಕೆ ಬಂದು ಇತ್ಯರ್ಥ ಮಾಡಿ ಈ ನಿರ್ಣಯಕ್ಕೋಸ್ಕರ ಎಷ್ಟು ಖರ್ಚಾಗುತ್ತಿದೆ ಎನ್ನುವುದನ್ನು ಲೆಕ್ಕ ಹಾಕಿದರೆ ಲಕ್ಷಾಂತರ ರೂಪಾಯಿ ಖರ್ಚಾಗಿದೆ. ಈ ನಿರ್ಣಯ ಪದೇ ಪದೇ ಸಭೆಯ ಮುಂದೆ ಬರುತ್ತಿರುವುದರಿಂದ ಇತರ ಮುಖ್ಯವಾದ ನಿರ್ಣಯಗಳಿಗೆ ಅವಕಾಶ ಎಲ್ಲದಂತಾಗಿದೆ. ಇದು ಬಹಳ ಚರ್ಚೆಯಾಗಿದೆ. ನನ್ನ ಮಾನ್ಯಮಿತ್ರರು ಅನೇಕರು ಒಂದು ವಿಷಯ ಹೇಳಿದರು. ಏನೆಂದರೆ ಈ ನಿರ್ಣಯ ಪಾಸ್ ಆಗುವವರೆಗೂ ಶ್ರೀ ಮಾನ್ ಡೊಡ್ಡಮೇಟಿ ಯವರು ಬದುಕಿರಬೇಕು ಎಂದು ಹೇಳಿದರು. ಈ ನಿರ್ಣಯ ಎಷ್ಟು ದಿವಸ ಹೋದರೂ, ಅದು ಪಾಸ್

(ಶ್ರೀ ಪಿ. ಎಸ್. ಪುಟ್ಟಣ್ಣ)

ಆಗುವವರೆಗೂ ಮಾನ್ಯ ಸದಸ್ಯರಾದ ದೊಡ್ಡಮೇಟಿಯವರು ಅವರು ಬದುಕಿರಬೇಕೆಂದು ನನ್ನ ಆಸೆ. ಈ ಒಂದು ನಿರ್ಣಯ ಇತ್ಯರ್ಥವಾಗದೇ ಪದೇ ಪದೇ ಸಭೆಯ ಮುಂದೆ ಬರುತ್ತಿರುವುದರಿಂದ, ವ್ಯರ್ಥ ಹಣ ವ್ಯಯವಾಗುವುದಲ್ಲದೆ, ಇತರ ನಿರ್ಣಯಗಳೂ ಚರ್ಚೆಗೆ ಬರಲು ಅವಕಾಶವಿಲ್ಲದಂತಾಗಿದೆ. ಆದುದರಿಂದ ಈ ನಿರ್ಣಯವನ್ನು ತಕ್ಷಣ ಓಟಿಗೆ ಹಾಕಬೇಕು ಇಲ್ಲವೇ ಅದನ್ನು ಮಾನ್ಯ ಸದಸ್ಯರು ವಾಪಸ್ಸು ಪಡೆಯಬೇಕು ಎಂದು ಹೇಳಿ, ಮಾನ್ಯ ಸದಸ್ಯರಾದ ಸೂರ್ಯನಾರಾಯಣರಾಯರ ಸೂಚನೆಗೆ ಅವಕಾಶ ಕೊಡಬಾರದೆಂದು ಹೇಳುತ್ತೇನೆ.

†ಶ್ರೀ ವೈ. ವೀರಪ್ಪ (ಹೊಳೆನರಸೀಪುರ).—ಸ್ವಾಮೀ, ಶ್ರೀಮಾನ್ ಸೂರ್ಯನಾರಾಯಣರಾಯರು ಇಲ್ಲಿ ಕ್ಲೋಷರು ಮೋಷನ್ನನ್ನು ತಂದು ಇಲ್ಲ ಪಾಸುಮಾಡಿಸಿದ್ದರೆ ನಾನು ಅವರಿಗೆ ಶಹಬಾಷ್‌ಗಿರಿಯನ್ನು ಕೊಡುತ್ತಿದ್ದೆ. ಏಕೆಂದರೆ ಅನೇಕ ಸಾರಿಯಿಂದ ಈ ಸಭೆಯಲ್ಲಿ ಇಂತಹ ಮಹತ್ವದ ವಾದ ಪ್ರಶ್ನೆ ಚರ್ಚೆಗೆ ಬಂದು ಮಾನ್ಯ ಸದಸ್ಯರುಗಳೆಲ್ಲಾ ಅವರ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಹೀಗೆ ಚರ್ಚೆಯಾಗಿರತಕ್ಕ ಈ ನಿರ್ಣಯವನ್ನು ಏನೋ ಒಂದು ಕಾರಣವನ್ನು ಇಟ್ಟು ಕೊಂಡು ಹೇಳುತ್ತ ಇದನ್ನು ಮುಂದಿನ ಸೆಷನ್ನಿಗೆ ಮುಂದೂಡಬೇಕೆಂದು ಮಾಡಿರುವ ಸೂಚನೆ ನೋಡಿದರೆ, ಇದರಿಂದ ಸರಕಾರದ ಧೋರಣೆ, ರೀತಿ ನೀತಿ ಇದೆಯೇ ಎಂದು ಹೇಳಲು ಸ್ವಲ್ಪ ಸಂಕಟವಾಗುತ್ತದೆ. ಇದಕ್ಕಾಗಿ ಈ ಸಭೆಯ ಕಾಲವನ್ನು ಕಳೆಯುವುದಕ್ಕೆ ಬದಲಾಗಿ ಈಗಲೇ ಇದರಬಗ್ಗೆ ಎಲ್ಲರ ಅಭಿಪ್ರಾಯಗಳನ್ನೂ ತಗೆದುಕೊಂಡರೆ ಯಾರು ಈ ನಿರ್ಣಯಕ್ಕೆ ಒಪ್ಪುತ್ತೇವೆಂದು ಹೇಳುತ್ತಾರೋ ಅವರು ಹೇಳುತ್ತಾರೆ. ಯಾರು ವಿರೋಧ ಮಾಡಬೇಕೆಂದುಹೇಳುತ್ತಾರೋ ಅವರು ಅವರ ಅಭಿಪ್ರಾಯವನ್ನು ಕೊಟ್ಟು ಬಿಡುತ್ತಾರೆ. ಹೀಗೆ ಹೇಳುವುದಕ್ಕೆ ಮಾಡಬೇಕೇ ಏನೋ ಒಂದು ರೀತಿಯಾದ Tactics ಎಂದು ಹೇಳಲೇ ಬೇಕಾಗುತ್ತದೆ. ಆ ರೀತಿಯಾದ Tactics ಮಾಡಿ ಇದಕ್ಕಾಗಿ ಹಣವನ್ನು ವೆಚ್ಚಮಾಡುವುದು ನಿಜವಾಗಿಯೂ ಸಂಕಟವನ್ನುಂಟು ಮಾಡುವ ವಿಚಾರ. ಡೆಮಾಕ್ರಸಿ ಪ್ರಕಾರ ಹೀಗೆ ಮಾಡುವುದು ಸರಿಯಲ್ಲ. ಇದನ್ನು ಮುಂದುವರಿಸಿ ಮುಂದಿನ ಸೆಷನ್ನಿಗೆ ತರಬೇಕು ಎನ್ನುವುದರ ಹಿನ್ನೆರೆಯೇನು ಎನ್ನುವುದು ನಮಗೆ ಅರ್ಥವಾಗುವುದಿಲ್ಲ. ಆದುದರಿಂದ ನಾನು ಇಲ್ಲಿ ಕ್ಲೋಷರು ಮೋಷನ್ನನ್ನು ತಂದು ಮೂವ್ ಮಾಡುತ್ತಿದ್ದೇನೆ. ಇದಕ್ಕೆ ಸಭೆಯವರು ಒಪ್ಪಿ ಅವರ ಅಭಿಪ್ರಾಯಗಳನ್ನು ಕೊಡಬೇಕೆಂದು ಹೇಳುತ್ತೇನೆ. ಹೀಗೆ ಮಾಡಬೇಕೆಂದರೆ ಇದನ್ನು ಮುಂದಿನ ಸೆಷನ್ನಿಗೆಂದು ಮುಂದೂಡತಕ್ಕದ್ದು ಸರಿಯಲ್ಲ ಎಂದು ಈ ಸಂದರ್ಭದಲ್ಲಿ ಬಹಳ ಸಂಕಟದಿಂದ ಹೇಳಬೇಕಾಗಿದೆ.

† ಶ್ರೀ ಕೆ. ಪುಟ್ಟಸ್ವಾಮಿ (ಮೈಸೂರು).—ಸ್ವಾಮೀ, ಮಾನ್ಯ ಸದಸ್ಯರಿಂದ ಶ್ರೀಮಾನ್ ಪುಟ್ಟಣ್ಣನವರು ಹೇಳುವಾಗ ''ಹಾಡಿದ್ದೇ ಹಾಡೋ ಕಿಸುಬಾಯಿ ದಾಸ'' ಎಂದು ಹೇಳಿದಂತೆ ಈಗ ಇದರ ಮೇಲೆ ಎಲ್ಲರೂ ಹೇಳಿದ್ದನ್ನೇ ಹೇಳುತ್ತಾ ಹೋಗುತ್ತಿರುವುದು ಇದೂ ಹಾಗೆಯೇ ಆಗಿದೆ ಕೊನೆಗೆ ಶ್ರೀಮಾನ್ ವೀರಪ್ಪನವರು ಹೇಳುವಾಗಲೂ ಅದನ್ನೇ ಹೇಳಿ ಒತ್ತಾಯ ಮಾಡಿದರೂ. ಈ ಮೈಸೂರುದೇಶ ವಿಶಾಲವಾಗುವುದಕ್ಕೆ ಮೊದಲೇ ಇದನ್ನೆಲ್ಲಾ ಲೋಕಸಭೆಯವರು ಪರಿಶೀಲನೆ ಮಾಡಿ ಈ ದೇಶದ ಹೆಸರನ್ನು ಯಾವರೀತಿ ಇಟ್ಟು ಕರೆಯಬೇಕು ಎನ್ನುವುದನ್ನು ನಿರ್ಧಾರ ಮಾಡಿದ್ದಾರೆ. ಇದಕ್ಕೆ ಈಗ ಬೇರೆ ಹೆಸರಿಟ್ಟು ಬದಲಾಯಿಸಬೇಕು ಎಂದು ''ಕರ್ನಾಟಕ'' ಎಂದು ಇಡಬೇಕು ಎನ್ನುವ ನಿರ್ಣಯ ಇಲ್ಲಿ ಬಂದಿದೆ. ಹೊಸ ರಾಜ್ಯಕ್ಕೆ ಹೆಸರನ್ನು ಇಟ್ಟಾಗ ಅಷ್ಟು ಲಘುವಾಗಿ ಮಾಡಲಲ್ಲ. ಆಗ ನಿರ್ಣಯ ಬಂದಾಗಲೂ ಈ ವಿಚಾರವಾಗಿ ನಿರ್ಣಯವನ್ನು ಒಂದಲ್ಲ ಎಷ್ಟೋ ಸಾರಿ ಇಷ್ಟು ಗಹನವಾದ ವಿಚಾರವೆಂದು ಚರ್ಚೆ ಮಾಡಿ ಎಲ್ಲರಿಗೂ ಸಮರ್ಪಕವಾಗಿರುವಂತೆ ಇದನ್ನು ಪರ್ಯಾಲೋಚನೆ ಮಾಡಬೇಕಾಗಿದೆ. ಈ ರೀತಿಯಾಗಿ ಮಾಡುವ ವಿಚಾರದಲ್ಲಿ ಬಹಳ ಸಾವಧಾನವಾಗಿ ಮಾಡಬೇಕು ಎಂದು ಇದನ್ನು ಮುಂದುವರಿಸಿ, ಈ ವಿಚಾರವಲ್ಲಿ ವಿಚಾರ ವಿನಿಮಯ ಮಾಡಿಕೊಂಡು ಸಾಧ್ಯವಾದ ಮಟ್ಟಿಗೂ

ಕೂಡ ಒಪ್ಪಿಗೆಗೆ ತಕ್ಕಂತೆ ಇರುವ ರೀತಿಯಲ್ಲಿ ಈ ನಿರ್ಣಯವನ್ನು ತರಬೇಕು ಎನ್ನುವುದು ಎಲ್ಲರಿಗೂ ಗೊತ್ತು, ಇಷ್ಟು ಗಹನವಾದ ವಿಚಾರಕ್ಕೆ ನಾಲ್ಕು ವರ್ಷಗಳು ಕಳೆದು ಹೋಯಿತು ಅಥವಾ ಅದಕ್ಕೂ ಈ–5–6 ದಿವಸಗಳು ಚರ್ಚೆಯಾಯಿತು.....

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ರೆಕ್ಕ ಹಾಕಿ ನೋಡಿದರೆ 20 ದಿವಸಗಳ ಮೇಲಾಗುತ್ತದೆ.

ಶ್ರೀ ಕೆ. ಪುಟ್ಟಸ್ವಾಮಿ.—ಶ್ರೀಮಾನ್ ಶೆಟ್ಟರಿಗೆ ಸರಿಯಾಗಿ ರೆಕ್ಕ ಗೊತ್ತಿದೆ ಎಂದು ತಿಳಿದಿದ್ದೆ ಆದರೆ ಅವರು ಹೇಳುತ್ತಿರುವ ರೆಕ್ಕ ಸರಿಯಾದುದಲ್ಲ. ಆದ್ದರಿಂದ ಈ ನಿರ್ಣಯದ ಚರ್ಚೆಗೆ ಈ ರೀತಿ ಬದಲಾವಣೆ ಮಾಡಿರುವಂತೆ ಒಪ್ಪುವುದು ಸಾಧುವಾದುದು ಮತ್ತು ಇದನ್ನು ಒಪ್ಪಬಹುದು ಎಂದು ಹೇಳುತ್ತೇನೆ.

† ಶ್ರೀ ಹೆಚ್. ಕೆ. ವೀರಣ್ಣಗೌಡ (ಮರಾಮತ್ತು ಶಾಖಾ ಸಚಿವರು).—ಸ್ವಾಮಿ, ವಿರೋಧ ಪಕ್ಷದವರು ಇಲ್ಲಿ ಹೇಳುವ ವಾದವನ್ನು ನೋಡಿದರೆ ಇಲ್ಲಿ ಏನೋ ಒಂದು ರೀತಿಯಾಗಿ ಮಾತನಾಡಿ ಇದರಲ್ಲಿ ರಾಜಕೀಯಮಾಡುವುದಕ್ಕೆ ಅವಕಾಶವಾಗಿದೆ ಎಂದು ಅವರು ಹೇಳುತ್ತಾ, ಇದು ನಾಲ್ಕು ವರ್ಷಗಳಿಂದಲೂ ಬರುತ್ತಿದೆ ಎಂದು ಹೇಳಿದರು. ಏಕೆ ಬರಬೇಕು ಎನ್ನುವುದನ್ನು ಸ್ವಲ್ಪ ಯೋಚನೆ ಮಾಡಬೇಕು. ನಾಲ್ಕು ವರ್ಷಗಳಿಂದ ಬರುತ್ತಿರುವುದನ್ನು ಇಷ್ಟು ಸುಲಭವಾಗಿ ನಾಲ್ಕು ನಿಮಿಷಗಳಲ್ಲಿ ಒಂದು ಚಟುಕ ಹಾಕುವಂತೆ ಮಾಡಬೇಕು ಎಂದು ಕೆಲವರು ಹೇಳುತ್ತಾರೆ. ಇದರಲ್ಲಿ ಏನೋ ಒಂದು ತರಹ ಹೆದರಿಕೆಯಿಂದ ಈ ಸಭೆಯಲ್ಲಿ ಸದಸ್ಯರುನ್ನು Face ಮಾಡುವುದಕ್ಕೆ ಇಷ್ಟವಿಲ್ಲ ಎಂದು ಹೇಳಿದರು. ಈ ರೀತಿ ಸದಸ್ಯರಿಗೆ ಹೇಳಲು ಅವರಿಗೆ ಸ್ವಾತಂತ್ರ್ಯವಿದೆ. ಅದಕ್ಕಾಗಿ ಹೆದರಿಕೊಂಡು ನಿಮ್ಮ ಮಾನ್ಯ ರಾಜಯ್ಯ ಶೆಟ್ಟಿಯವರು ಹೇಳುವ ಹಾಗೆ ಒಂದೇ ನಿಮಿಷದಲ್ಲಿ ಚಟುಕ ಹಾಕುವಂತೆ ಮಾಡಬೇಕೆಂದು ಹೇಳುವುದು ಅಷ್ಟು ಸರಿಯಲ್ಲ. ಶ್ರೀಮಾನ್ ರಾಜಯ್ಯ ಶೆಟ್ಟಿಯವರು ಹೇಳುವಂತೆ ಅಷ್ಟು ಸುಲಭವಾಗಿ ಕರ್ನಾಟಕ ಎಂದು ಹೇಳಲು ಎಷ್ಟೋ ಗೊಂದಲಗಳನ್ನು ಉಂಟು ಮಾಡುತ್ತದೆ. ಪ್ರಪಂಚದಲ್ಲಿ Give and Take Policy, There is a way of compromise, etc., ಇವೆಲ್ಲ ಇದೆ. ಕಾಂಗ್ರೆಸ್ಸು ಪಕ್ಷದಲ್ಲಿ ಭಿನ್ನಾಭಿಪ್ರಾಯಗಳಿವೆ ಎಂದು ಹೇಳುವ ಮಾತುಗಳು ಬೇರೆ. ನಿಮ್ಮ ಮಾತು ಬೇರೆ, ನಮ್ಮ ಮಾತು ಬೇರೆ. ಇದು ದೇಶದ ಪ್ರಶ್ನೆ, ಇದರಲ್ಲಿ ಭಿನ್ನಾಭಿಪ್ರಾಯದ ಮಾತೇ ಇಲ್ಲ. ಈ ಸಭೆಯಲ್ಲಿರುವ ವಿರೋಧ ಪಕ್ಷದವರು ಮತ್ತು ಆಡಳಿತದ ಪಕ್ಷದವರ ಮಾತಲ್ಲ. ಇದನ್ನು ದೇಶಕ್ಕೆಲ್ಲಾ ಅನ್ವಯಿಸಬೇಕಾದದ್ದು. ಇಲ್ಲಿ ಒಂದಂಶವನ್ನು ನಾವು ಅರೋಚನೆ ಮಾಡಬೇಕು. ಇದರಲ್ಲಿ ಬೇಕಾದಷ್ಟು ಪಿಜ್ಜಾಸೆ ನಡೆದು ಎನ್‌ಕ್ವೈರಿ ಕಮಿಷನ್ನು ಬಂದು ಆಗಿ ಇವೆಲ್ಲಾ ಹಳೇ ಕಥೆಯಾಗಿದೆ. ಇಂಡಿಯಾ ಸರಕಾರದವರು ಪಾರ್ಲಮೆಂಟಿನಲ್ಲಿ ಒಂದು ಕಾನೂನನ್ನು ಮಾಡಿದ್ದಾರೆ. ಆದರೆ ಒಂದು ಕಾನೂನಲ್ಲ. ಈ ದೇಶಕ್ಕೆ ಅನ್ವಯಿಸುವಂತಹ ಸಮಗ್ರವಾದ ಕಾನೂನೂ ಇದೆ. ಅದರಲ್ಲಿ ಮೈಸೂರು ದೇಶಕ್ಕೆ ಇಂತಹ ಭಾಗಗಳೆಲ್ಲಾ ಸೇರಬೇಕು ಎಂದು ಇತ್ಯರ್ಥ ಮಾಡಿ ಇರುವ ಕಾನೂನೂ ಇದೆ. ಇದರಲ್ಲಿ ಒಂದು ಭಾಗವನ್ನು ತೆಗೆದುಕೊಂಡು ಯಾಪ್ರದೋ ಒಂದು ಅಭಿಮಾನದಿಂದ ಇದನ್ನು ತೆಗೆದುಕೊಂಡು ಬಂದಿರಬಹುದು. ಇದರಬಗ್ಗೆ ಈಗ ಚರ್ಚೆ ಮಾಡವುದು ಸೂಕ್ತವಲ್ಲ. ತೀರ್ಮಾನವನ್ನು ತೆಗೆದುಕೊಳ್ಳುವುದು ಸೂಕ್ತವಲ್ಲ. ಬೇರೊಂದು ಆಕ್ಟಿನಲ್ಲಿ ಒಂದು ಭಾಗವನ್ನು ತಿದ್ದುಪಡಿ ಮಾಡಬೇಕು ಎಂದು ಕೆಲವು ಸದಸ್ಯರು ಹೇಳಿದರು. ಈ ರೀತಿಯಾಗಿ ಒಂದಕ್ಕೂಂದು ಗೊಂದಲಗಳಿಗೆ ಅವಕಾಶ ಕೊಡುವಂತಹ ಪ್ರಶ್ನೆಯಲ್ಲ. ದೇಶದಲ್ಲಿ ಇದು ವಿರೋಧ ಪಕ್ಷದವರನ್ನು ಕಂಡರೆ ಏನೋ ಹೇಳುತ್ತಾರೆ ಎಂದು ಶ್ರೀಮಾನ್ ಮಾದಪ್ಪನವರು ಹೇಳಿದರು ಇದು ಒಂದು ಪಕ್ಷಕ್ಕೆ ಸೇರಿದ್ದಲ್ಲ. ಸಂಸ್ಥಾನದಲ್ಲಿರುವ ಕಾಂಗ್ರೆಸ್ಸು ಪಕ್ಷ ಮತ್ತು ವಿರೋಧ ಪಕ್ಷದ ಮಾತಲ್ಲ. ಇದನ್ನು ಪ್ರಸ್ತಾಪ ಮಾಡುವಾಗ ಇದರಲ್ಲಿ ಸೇರಿರತಕ್ಕ ಅನೇಕ

(ಶ್ರೀ ಹೆಚ್. ಕೆ. ವೀರಣ್ಣಗೌಡ)

ಪ್ರಶ್ನೆಗಳು ಬರುತ್ತವೆ. ಇವೆಲ್ಲ ಉದ್ಭವವಾಗುತ್ತಿರುವುದಿಂದಲೇ, ಇಂತಹ ಗೊಂದಲಗಳು ಇರುವುದರಿಂದಲೇ ಇದು ನಾಲ್ಕು ವರ್ಷಗಳಿಂದಲೂ ಎಳೆದುಕೊಂಡು ಬರುತ್ತಿದೆ. ಇದು ಎರಡು ಮೂರು ದಿನಗಳ ಮಾತಲ್ಲ. ಇದನ್ನು ಇನ್ನು ಎರಡು ಮೂರು ತಿಂಗಳು ಕಳೆದು ಮುಂದಿನ ಸೆಷನ್ನಿನಲ್ಲಿ ತಂದು ತೀರ್ಮಾನ ಮಾಡಿದರೆ ಆಕಾಶವೇನೂ ಕೆಳಕ್ಕೆ ಬರುವುದಿಲ್ಲ. ಹಾಗೇನೂ ಆಕಾಶಬಿದ್ದು ಹೋಗುವ ವಾತಾವರಣ ಬಂದು ಇದು ತೀರ್ಮಾನವಾಗದೇ ಹೋದರೆ ಹೇಗೆ ಎನ್ನುವ ಮಾತಲ್ಲ. ಅಂತಹ ಬಿಕ್ಕಟ್ಟಿನ ಪ್ರಯತ್ನವನ್ನೇನೂ ಮಾಡಿಲ್ಲ. ಇದನ್ನು ಸರಿಯಾಗಿ ಅರೋಡನೆ ಮಾಡಲು ದೇಶದಲ್ಲಿ ಒಂದು ವಾತಾವರಣವನ್ನು ಕಲ್ಪನೆ ಮಾಡಿಕೊಟ್ಟರೆ ಏನಾಗುತ್ತದೆ ?

ಶ್ರೀ ಯು. ಎಂ. ಮಾದಪ್ಪ.—ಜನರಲ್ ಎಲಕ್ಷನ್ನು ಆದ ಮೇಲೆ ತರುತ್ತೀನೆ ಎಂದು ಹೇಳಿ ಬಿಡಿ. (ನಗು)

ಶ್ರೀ ಎಚ್. ಕೆ ವೀರಣ್ಣಗೌಡ.—ಜನರಲ್ ಎಲಕ್ಷನ್ನು ಆದ ಮೇಲೆ ಎನ್ನುವುದಲ್ಲ. ಇದನ್ನು ಈಗ ಡಿಫರ್ ಮಾಡಬೇಕು ಎಂದು ಏಕೆ ಹೇಳುತ್ತಿದ್ದೀವೆ ಎಂದರೆ, ನಿಮ್ಮ ಮತ್ತು ನಮ್ಮ ಅಭಿಪ್ರಾಯವನ್ನು ತೆಗೆದುಕೊಂಡು ಮತ್ತು ದೇಶದಲ್ಲರುವ ಎಲ್ಲಾ ಜನರ ಅಭಿಪ್ರಾಯಗಳನ್ನು ತೆಗೆದುಕೊಂಡು ತೀರ್ಮಾನ ತೆಗೆದುಕೊಳ್ಳುವುದು ಸೂಕ್ತವಾಗಿರುತ್ತದೆ. ಇದು ನಮಗೇ ಸಂಬಧಪಟ್ಟದ್ದು, ಬಾಕಿಯವರಿಗೆ ಸಂಬಧಪಟ್ಟ ಒಂದೇ ಪ್ರಶ್ನೆಯಲ್ಲ. ಇಲ್ಲಿ ಇನ್ನೂ ಅನೇಕ ಪ್ರಶ್ನೆಗಳು ಸೇರಿಕೊಂಡಿವೆ. ಇದಕ್ಕೆ ಏನೋ ಒಂದು ಕಾರಣವನ್ನು ಕೊಡಬೇಕೆಂದಲ್ಲ. ನಾನು ಸ್ಪಷ್ಟವಾಗಿ ಹೇಳುವುದಾದರೆ, ಇಲ್ಲ ಕರ್ನಾಟಕ ಏಕೀಕರಣವಾಗಬೇಕು ಎಂದು ಹಿಂದೆ ಬಂದಾಗ ಅದನ್ನು ವಿರೋಧ ಮಾಡಿದಂತಹ ಮನುಷ್ಯನಾಗಿ ಬೇಕಾದಷ್ಟು ಹೋರಾಟವನ್ನೂ ಮಾಡಿದ್ದೆ.

2-30 P. M.

ಅದಕ್ಕಾಗಿ ಬೇಕಾದಷ್ಟು ಹೋರಾಟವನ್ನು ನಡೆಸಿದ್ದೇವೆ. ನುಮಾರು 30–40 ಸಾವಿರ ಜನಸಂಖ್ಯೆ ಇರತಕ್ಕ ಕಾರ್ಖಾನೆಸ್ಟನಲ್ಲಿ ಒಂದು ನಿರ್ಣಯವನ್ನೂ ಸಹ ಮಾಡಲಾಗಿದೆ. ಆದರೆ ಒಂದು ತೀರ್ಮಾನವನ್ನು ನಾವು ತೆಗೆದು ಕೊಂಡ ಮೇಲೆ ಪುನಃ ತರೆ ಬಾಗುವುದಕ್ಕೆ ಅವಕಾಶ ಕೊಡುವ ಹಾಗಿಲ್ಲ. ನೀವು ಸಹ ಬೇಕಾದಷ್ಟು ಸೇವೆ ಮಾಡಿದ್ದೀರಿ. ಅದಕ್ಕೆ ಚಾಜೂ ತಪ್ಪಿಲ್ಲ. ಇದು ಒಂದು ದೊಡ್ಡ ಸಮಸ್ಯೆ. ಅಭಿಮಾನದ ಮಾತು ಇದಕ್ಕೆ ಸ್ವಲ್ಪ ಕಾಲಾವಕಾಶವನ್ನು ಕೊಡಬೇಕು. ಅದನ್ನು ಬಿಟ್ಟು ಯಾರೋ ಕೆಲವರ ಪ್ರೇರಣೆಯಿಂದ ನುಮ್ಮ ನುಮ್ಮನೆ ಈ ಸಭೆಯಲ್ಲಿ ಈಗಲೇ ಆ ಬಗ್ಗೆ ಅನೇಕ ಗೊಂದಲವನ್ನುಂಟು ಮಾಡುವುದಕ್ಕೆ ಆಡ್ಡಿ ಮಾಡುವುದು ಸರಿಯಲ್ಲ. ನೀವು ನಾವೂ ಸೇರಿ ಈ ವಿಚಾರದಲ್ಲಿ ಮಾತನಾಡಿ ಅದಷ್ಟು ಜಾಗ್ರತೆಯಾಗಿಯೋ ಒಂದು ತೀರ್ಮಾನಕ್ಕೆ ಬರೋಣ. ಈ ವಿಷಯವಾಗಿ ಹೊರಗಡೆಯಲ್ಲ ಮಾತನಾಡುವುದು ಇದೆ. ಎಲ್ಲರೂ ಒಂದು ಒಮ್ಮತ ಅಭಿಪ್ರಾಯಕ್ಕೆ ಬರುವುದು ಇದೆ. ಯಾರೋ ಸದಸ್ಯರು ಈ ನಿರ್ಣಯವನ್ನು ತಂದರು, ಆ ಪಾರ್ಟಿ ತಂದರು, ಈ ಪಾರ್ಟಿ ತಂದರು ಎಂಬ ಯಾವ ಒಂದು ಪಕ್ಷಕ್ಕೂ ಇದನ್ನು ಅನ್ವಯಿಸುವುದು ಸರಿಯಲ್ಲ. ವಿರೋಧ ಪಕ್ಷದ ನಾಯಕರು ಇಲ್ಲಿ ಇದ್ದಾರೆ ಕೆಲವು ಸದಸ್ಯರು ಇದನ್ನು ಮುಂದುವರಿಸಿ ಎಂತಲೂ ಮತ್ತೆ ಕೆಲವು ಸದಸ್ಯರು ಇದನ್ನು ಮುಂದುವರಿಸುವುದು ಬೇಡ ಎಂತಲೂ ಹೇಳುತ್ತಿದ್ದಾರೆ. ಆದ್ದರಿಂದ ನಾವು ನೀವೂ ಕಲೆತು ಒಮ್ಮತ ತೀರ್ಮಾನಕ್ಕೆ ಬರ ಬೇಕಾಗಿದೆ ಯಾವ ರೀತಿ ಹೆಸರು ಕರೆಯಬೇಕು ಎಂದು ಹೇಳುವುದು ಒಂದು ಭ್ರಮೆ. ಈ ವಿಚಾರವನ್ನು ವಿಶೇಷ ಚರ್ಚೆಯಿಲ್ಲದೆ ಸಮಾಧಾನಕರವಾಗಿ ಒಂದು ತೀರ್ಮಾನಕ್ಕೆ ತರುವುದು ಒಳ್ಳೆಯದು. ಚರ್ಚೆ ಇಲ್ಲದೆಯೇ ಎಲ್ಲರೂ ಒಪ್ಪಿಕೊಳ್ಳುವ ಅವಕಾಶವಿದೆ. ಇನ್ನು

ಅನೇಕ ಕನ್ನಡ ಪ್ರಾಂತ್ಯಗಳೆಲ್ಲಾ ಸೇರಬೇಕು. ಅಲ್ಲಲ್ಲಿರತಕ್ಕ ಕನ್ನಡ ರಾಜ್ಯಗಳು ಇನ್ನು ಒಂದಾಗಬೇಕು. ಈ ಪ್ರಶ್ನೆಯನ್ನು ಪಾರ್ಟಿ ಪ್ರಶ್ನೆಯನ್ನಾಗಿ ತೆಗೆದುಕೊಳ್ಳಬೇಡಿ ಇದು ದೇಶದ ಪ್ರಶ್ನೆ, ಜನಗಳ ಪ್ರಶ್ನೆ ಆದ್ದರಿಂದ ಕಾಂಗ್ರೆಸ್ ಸರ್ಕಾರವನ್ನು ಹಿಯ್ಯಾಳಿಸುವ ಮಾತು ಬೇಡ. ನಮಗೆ ಸ್ವಾತಂತ್ರ್ಯ ಬಂದಿಡೆಯೆಂದು ಇಷ್ಟು ಬಂದಂತೆ ನಡೆಯುವುದು ಸರಿಯಾದ ಮಾರ್ಗವಲ್ಲ

ಶ್ರೀ ಯು. ಎಂ. ಮಾವಿಷ್ಣು. ಅದಕ್ಕಾಗಿಯೇ ಈ ನಿರ್ಣಯವನ್ನು ವಿತ್‌ಡ್ರಾ ಮಾಡಿಕೊಳ್ಳಿ ಎಂದು ಕೆಲವರು ಹೇಳಿದ್ದು. ಆಗ ಈ ಸಭೆಯೇ ಮುಂದುವರಿಯುತ್ತದೆ ಅಥವಾ ಅಡ್ಜರ್ನ್ ಆಗುತ್ತದೆ.

ಶ್ರೀ ಎಚ್. ಕೆ. ವೀರಣ್ಣಗೌಡ.—ಸ್ವಲ್ಪ ನೀವು ಶಾಂತವಾಗಿ ಕೇಳಿದರೆ ಒಳ್ಳೆಯದು. ಈ ಪ್ರಶ್ನೆಯನ್ನು ಇನೂ ಸ್ವಲ್ಪ ನಿಧಾನವಾಗಿ ಚರ್ಚೆ ಮಾಡುವ ಉದ್ದೇಶವೇನೂ ಇಲ್ಲ. ಫೈನಲ್ ಆಗಿ ತೀರ್ಮಾನ ಮಾಡುವುದಕ್ಕೇನೇ ಈ ಚರ್ಚೆ ಇಲ್ಲಿಟ್ಟಿದೆ ಕೆಲವರು ಇದನ್ನು ಸಾಧ್ಯವೆಂತಲೂ ಮತ್ತೆ ಕೆಲವರು ಸಾಧ್ಯವಿಲ್ಲವೆಂತಲೂ ಹೇಳುತ್ತಿರುವುದರಿಂದ ಇದು ಸ್ವಲ್ಪ ಸಂಶಯಕ್ಕೆಡೆ ಕೊಟ್ಟಿದೆ. ಅದು ನಿಜವೇ ಯಾರೇ ಆಗಲೀ ಐಸಾ ಪೈಸಾ ಎಂದು ಹೇಳಬೇಕಾ. ಅದಿಲ್ಲ ಅಂದ ಮೇಲೆ ಇದರಲ್ಲಿ ಇನ್ನೂ ಏನೋ ಇದೆ ಎಂಬ ಅರ್ಥ ಬರುತ್ತದೆ. ಸುಮಾರು ಎರಡು ತಿಂಗಳ ಕೆಳಗೆ ಎಷ್ಟೋ ಜನರು ಇದಕ್ಕೆ ಯಾರು ವಿರೋಧ ಮಾಡಬೇಡಿಎಂದು ಹೇಳಿದ್ದರ ಪೈಕಿ ಕೆಲವರು ವಿರೋಧ ಮಾಡುತ್ತಲು ಇದ್ದಾರೆ, ಮತ್ತೆ ಕೆಲವರು ಬೆಂಬಲ ಕೊಡುತ್ತಲೂ ಇದ್ದಾರೆ.

ಶ್ರೀ ಎ. ಶ್ರೀ ನಿವಾಸಶೆಟ್ಟಿ.—ಇಂಗ್ಲಿಷ್‌ನಲ್ಲಿ ಮೈಸೂರು ಎಂತಲೂ ಕನ್ನಡದಲ್ಲಿ ಕರ್ಣಾಟಕ ವೆಂತಲೂ ಹೆಸರಿಡಿ.

ಶ್ರೀ ಎಚ್. ಕೆ. ವೀರಣ್ಣಗೌಡ.—ಇದಕ್ಕೆ ಒಂದು ಹೆಸರಿಡಿ ಬೇಕಾದರೆ ನೀವೂ ನಾವೂ ಮಾತ್ರ ಭಾಗವಹಿಸಬೇಕು. ಎಂದು ಇದು ದೇಶಕ್ಕೆ ಸಂಬಂಧಪಟ್ಟ ಪ್ರಶ್ನೆ ಮತ್ತೆ ಮತ್ತೆ ರಿಪೀಟ್ ಮಾಡಬೇಡಿ. ಕರ್ಣಾಟಕ ಅಥವಾ ಮೈಸೂರು ಎಂದು ಹೆಸರಿಡಬೇಕಾದರೆ ಇಡೀ ಸಂಸ್ಥಾನದಲ್ಲಯೇ ಒಂದು ಸಮಗ್ರವಾದ ಅಕ್ಷರ ಆಗಬೇಕು. ಇದರಲ್ಲಿ ಬೇರೆ ಬೇರೆ ಭಾಗಗಳ ಪ್ರಶ್ನೆ, ಅಲ್ಲಿನ ಶಿಫಾರ್ಸುಗಳು ಹೀಗೆ ಎಲ್ಲವನ್ನೂ ಪರಿಶೀಲನಬೇಕಾಗಬಹುದು. ಆ ಕಾಲ ಸನ್ನಿಹಿತವಾಗುತ್ತಿದೆ. ಅಂಥಾದರಲ್ಲಿ ಸುಮ್ಮನೆ ದುಡುಕುವುದು ಅಷ್ಟಾಗಿ ಪ್ರಯೋಜನವಿಲ್ಲ.

ಶ್ರೀ ಯು. ಎಂ. ಮಾದಷ್ಣ.—ಚಾಮರಾಜನಗರ ಮತ್ತು ರಾಮ ನಮುದ್ರ ಮುನಿಸಿ ಪಾಲಿಟಿ ಮರ್ಜ್ ಆದಾಗ ಶ್ರೀಮಾನ್ ಹನುಮಂತಯ್ಯನವರು ರಾಮ ನಮುದ್ರ-ಚಾಮರಾಜ ನಗರ ಮುನಿಸಿ ಪಾಲಿಟಿ ಎಂದು ರಿಕ್ಲೇರ್ ಮಾಡಿದರು

ಒಬ್ಬ ಸದಸ್ಯರು.—ಈಗಿನಂತೆಯೇ ಮೈಸೂರು ಎಂದು ಹೆಸರಿದ್ದರೆ ಏನು ಅನಾಹುತ ವಾಗುತ್ತದೆ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಆ ವಿಷಯವನ್ನು ಈ ಸಭೆಗೆ ಸಂಬಂಧಪಟ್ಟ ಪ್ರಶ್ನೆಯೆಂದು ತಿಳಿದು ವಿಚಾರ ಮಾಡಬೇಕು. ಯಾವಾಗಲೂ ಕಾಂಗ್ರೆಸ್ ಪಕ್ಷ, ವಿರೋಧ ಪಕ್ಷ, ಸ್ವಾತಂತ್ರ್ಯ ಪಕ್ಷ ಎಂಬುದಾಗಿ ಈ ಪ್ರಶ್ನೆಯ ಬಗ್ಗೆ ಭೇದ ಭಾವವನ್ನಿಟ್ಟುಕೊಂಡು ವಿವಿಧ ಭಾಗಗಳಾಗಿ ವಿಂಗಡಿಸುವುದು ಬೇಡ. ಇದಕ್ಕೆ ಸ್ವಲ್ಪ ಕಾರಾವಕಾಶವನ್ನು ಕೊಟ್ಟರೆ ಒಳ್ಳೆಯದು ಆದ್ದರಿಂದ ಈಗ ನನ್ನ ಮಿತ್ರರಾದ ಶ್ರೀ ಸೂರ್ಯನಾರಾಯಣರಾವ್ ಅವರು ತಂದಿರತಕ್ಕ ನಿರ್ಣಯವನ್ನು ತಾವೆಲ್ಲರೂ ಅವಿರೋಧವಾಗಿ ತೀರ್ಮಾನ ಮಾಡಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ.

† ಶ್ರೀ ಎ. ಜೆ. ದೊಡ್ಡಮೇಟಿ (ರೋಣ್).—ಅಧ್ಯಕ್ಷರೇ, ನನ್ನ ಮಾನ್ಯ ಮಿತ್ರರಾದಂಥ ಶ್ರೀಮಾನ್ ಸೂರ್ಯನಾರಾಣರಾವ್ ಅವರು ಏನೊಂದು ಸೂಚನೆಯನ್ನು ತಂದಿದ್ದರೋ ಅದನ್ನು ನಾವೆಲ್ಲರೂ ಸಹಾನುಭೂತಿಯಿಂದ ನೋಡುವುದು ಅವಶ್ಯಕ. ಅದರೆ ಶ್ರೀಮಾನ್ ವೀರಣ್ಣಗೌಡರ ಕೆಲವು ಗಾಂಭೀರ್ಯವಾದ ಮಾತುಗಳ ಬಗ್ಗೆ ಸಂಪೂರ್ಣ ನಾನು ವಿರೋಧ ಇದ್ದೇನೆ. ಕೆಲವು

(ಶ್ರೀ ಎ. ಜೆ. ದೊಡ್ಡಮೇಟಿ)

ಸಾತುಗಗಳನ್ನು ಅವರು ಹೇಳಿದ ಮೇಲೆ ನನಗೆ ಒಂದು ವಿಷಯ ಅಲೋಡನೆಗೆ ಬಂತು ವಿಶಾಲ ಕರ್ನಾಟಕದಲ್ಲಿ ಇದು ಒಂದು ಭಾಗ. ಇಂತಹ ಒಂದು ಭಾಗ ವಿಶಾಲ ಕರ್ನಾಟಕ ದಲ್ಲಿರುವಾಗ ಇದಕ್ಕೆ ಬೇರೆ ಪ್ರತ್ಯೇಕ ಹೆಸರು ಇರುವುದು ಸರಿಯಲ್ಲ ಈಗ ಒಂದು ರೀತಿ ಬಸಿ ಬಸಿ ಟಿಂಡೆನ್ಸಿ ಇದೆ. ಅಂಥಾದ್ದರಲ್ಲಿ ಈಗಲೇ ಕರ್ನಾಟಕವೆಂದು ಹೆಸರಿಡುವುದು ಸರಿಯಾಗಿದೆ. ನನ್ನ ಅಭಿಪ್ರಾಯವಷ್ಟೆ ಇದು ತೀರ್ಮಾನವಾಗಿ ಆಗಬೇಕೆಂಬುದೆ ನನ್ನ ಅಭಿಲಾಷೆ ಇನ್ನು ಹೆಚ್ಚಿಗೆ ಈ ವಿಷಯ ದಲ್ಲಿ ಮಾತನಾಡುವುದಿಲ್ಲ ಆದರೆ ಶ್ರೀಮಾನ್ ಸೂರ್ಯನಾರಾಯಣರಾವ್ ಅವರು ತಂದಿರತಕ್ಕ ಸೂಚನೆಯ ಪರಿಣಾಮ ನನಗೆ ಅರ್ಥ ವಾಗಲಿಲ್ಲ. ಈಗ ಇದು ಮುಂದಿನ ಅಧಿವೇಶನಕ್ಕೆ ಹೋಗಬೇಕು. ಮುಂದಿನ ಅಧಿವೇಶನದಲ್ಲಿ ನಾನ್ ಆಫಿಷಿಯರ್ ರಿಸಲ್ಯೂಷನ್‌ಗಳಲ್ಲಿ ಬರಬೇಕು ಎಂಬ ಅಭಿಪ್ರಾಯವನ್ನು ಇಟ್ಟುಕೊಂಡ ಹಾಗೆ ಕಾಣುತ್ತದೆ. ಈ ನಿರ್ಣಯವನ್ನು ಮೊದಲನೆ ದಿವಸ ಅಥವಾ ಎರಡನೆಯ ದಿವಸದೊಳಗೆ ತೆಗೆದುಕೊಳ್ಳುತ್ತೇವೆ, ಅಮೇಲೆ ಬೇರೆ ಬೇರೆ ನಿರ್ಣಯಗಳನ್ನು ಕಳುಹಿಸಿದ್ದರೆ ಅದರ ಪರಿಣಾಮ ಏನಾಗುತ್ತದೊ ಗೊತ್ತಿಲ್ಲ. ಈಗ ಸ್ವಾಭಾವಿಕ ವಾಗಿ ಈ ನಿರ್ಣಯ ಮುಂದಕ್ಕೆ ಹೋಗಲಿ ಅದರಿಂದೇನೂ ತೊಂದರೆ ಇರುವುದಿಲ್ಲವೆಂದು ಹೇಳುತ್ತಿದ್ದಾರೆ. ಈ ರೀತಿ ಅರ್ಧಂಬರ್ಧವಾಗಿ ನಿರ್ಣಯಗಳ ಮೇಲೆ ಚರ್ಚೆಯಾದರೆ ಏನು ಪ್ರಯೋಜನ? ಪೂರ್ತಿಯಾಗಿ ಚರ್ಚೆಯಾಗಿ ನಿರ್ಣಯಗಳ ಮೇಲೆ ಅಂತ್ಯ ತೀರ್ಮಾನ ಮಾಡಬೇಕು. ಆದ್ದರಿಂದ ಈಗ ಶ್ರೀ ಸೂರ್ಯ ನಾರಾಯಣರಾವ್ ಅವರು ತಂದಿರುವ ಸೂಚನೆಯ ನಿರ್ಣಯ ಏನಾಗುತ್ತದೆಂಬದನ್ನು ಮಾನ್ಯ ಅಧ್ಯಕ್ಷರು ತಿಳಿದು ನಮಗೆ ಹೇಳಿದರೆ ಸ್ವಲ್ಪ ಸ್ಪಷ್ಟವಾಗುತ್ತದೆ. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರಿ ಸಿ. ಜೆ. ಮುಕ್ಕಣ್ಣಪ್ಪ (ಗುಬ್ಬಿ).—ಸ್ವಾಮಿ, ಶ್ರೀಮಾನ್ ದೊಡ್ಡಮೇಟಿಯವರಿಗೆ ವಿಶಾಲ ಮೈಸೂರಿಗೆ ಕರ್ನಾಟಕವೆಂಬ ಹೆಸರನ್ನು ಇಡಬೇಕೆಂದು ಎಷ್ಟು ಮನಸ್ಸು ಇದೆಯೊ ಅದೇ ರೀತಿ ಮೈಸೂರ್ ಎಂಬುದಾಗಿ ಉಳಿಸಿಕೊಳ್ಳಬೇಕು ಎಂದು ನಮಗೂ ಅಷ್ಟೆ ಮನಸ್ಸೂ ಇದೆ. ಶ್ರೀ ವೀರಣ್ಣಗೌಡರ ಕೆಲವು ಮಾತುಗಳಲ್ಲಿ ಅವರಿಗೆ ಬಹಳ ವಿರೋಧವಿದೆ ಎಂಬು ದಾಗಿ ಹೇಳಿದರು. ಕರ್ನಾಟಕ ಏಕೀಕರಣವಾಗಬೇಕೆಂದು ಒಂದೇ ಸಮನೆ 50-60 ವರ್ಷಗಳ ಕಾಲ ದುಡಿದು ಈಗ ವಿಶಾಲ ಮೈಸೂರು ಆಯಿತು. ಅನೇಕ ಭಾಗಗಳು ಸೇರಿದುವು, ಆದರೂ ಇನ್ನೂ ಕೆಲವು ಕನ್ನಡ ಭಾಗಗಳು ಈ ವಿಶಾಲ ಮೈಸೂರಿಗೆ ಸೇರಿಲ್ಲ. ನಾನಾದರೂ ಹೇಳುತ್ತೇನೆ ಶ್ರೀಮಾನ್ ದೊಡ್ಡಮೇಟಿಯವರು ಈಚೆಗೆ ಇಡೀ ವಿಶಾಲಮೈಸೂರು ದೇಶಕ್ಕೆ ಒಂದು ರೀತಿಯ ಅಪಮಾನಕರವನ್ನುಂಟು ಮಾಡುವುದಕ್ಕೆ ಹೊರಟಿದ್ದಾರೆ. ಒಂದು ಪುಸ್ತಕವನ್ನು ಪ್ರಿಂಟ್ ಮಾಡಿಸಿ ಅದನ್ನು ಎಲ್ಲಾ ಕಡೆಯೂ ಪ್ರಚಾರ ಮಾಡಲಿಕ್ಕೆ ಹೊರಟಿದ್ದಾರೆ. ಮೈಸೂರಿನ ಒಂದು ಅಭ್ಯುದಯಕ್ಕೆ ಹೋರಾಡಿದವರು ಬಹಳ ಮಂದಿ ಇದ್ದಾರೆ. ಸುಮಾರು 90 ಲಕ್ಷ ಜನರು ಈ ಮೈಸೂರಿನ ವೈಶಿಷ್ಟ್ಯವನ್ನು ಹಿಂದಿನಿಂದಲೂ ಎತ್ತಿ ಹಿಡಿದಿದ್ದಾರೆ. ಹಿಂದೆ ಚೋಳರು, ಚಾಲುಕ್ಯರು ಹೀಗೆ ಅನೇಕ ಸಾಮಂತ ರಾಜರು ಇದ್ದಾಗ ಕನ್ನಡ ದೇಶಗಳೆಲ್ಲಾ ಒಂದಾಗಿ ಕರ್ನಾಟಕವೆಂಬ ಹೆಸರಿತ್ತು. ಈಗ ಮೈಸೂರು ಸಂಸ್ಥಾನದಲ್ಲಿ ವಿಶಾಲ ಮೈಸೂರು ಆದ ಮೇಲೆ ಕರ್ನಾಟಕವೆಂಬ ಹೆಸರು ಇಡಬೇಕೆಂದು ಮತ್ತೆ ಒಂದು ಹೋರಾಟ ನಡೆಯುತ್ತಿದೆ. ಇಂತಹ ಸನ್ನಿವೇಶದಲ್ಲಿ ಮೈಸೂರಿಗೆ ಕರ್ನಾಟಕವೆಂಬ ಹೆಸರಿಡಬೇಕೆಂಬ ಬಗ್ಗೆ ಒಂದು ಅನಾಮಧೇಯ ಪುಸ್ತಕವನ್ನು ನನ್ನ ಮಿತ್ರರಾದಂಥ ಶ್ರೀಮಾನ್ ದೊಡ್ಡಮೇಟಿಯವರು ಪ್ರಿಂಟ್ ಮಾಡಿಸಿ ಈ ದೇಶದಕ್ಕೆ ಒಂದು ಸರಿಯಾದ ಹೆಸರಿಲ್ಲವೆಂದು ಹೇಳಿ ದೇಶದ ಮುಂದೆ ಪ್ರಚಾರ ಮಾಡುವುದಕ್ಕೆ ಹೊರಟಿರುವುದು ಸರಿಯಾದ ಮಾರ್ಗವಲ್ಲ. ಇವರು ಎಲ್ಲರಿಗೂ ಅಪ ಪ್ರಚಾರ ಮಾಡಲಿಕ್ಕೆ ಹೋರಟು ತಮ್ಮ ಒಂದು ಕೆಚ್ಚೆದೆಯನ್ನು ಮೈಸೂರಿನಲ್ಲಿ ತೋರಿಸಲಿಕ್ಕೆ ಯತ್ನಿಸಿದ್ದಾರೆ. ನಾವು ವಿಶಾಲ ಮೈಸೂರು ಆಗಿರಲೇ ಬೇಕೆಂದು ನಾವು ಹೇಳುತ್ತೇವೆ.

ಶ್ರೀ ಎ. ಜಿ. ದೊಡ್ಡಮೇಟಿ.—ಮೈಸೂರು ಎಂಬ ಹೆಸರು ಒಳ್ಳೆಯದೋ ಅಥವಾ ಕರ್ನಾಟಕ ಎಂಬ ಹೆಸರು ಒಳ್ಳೆಯದೊ ಎಂದು ತೀರ್ಮಾನ ಮಾಡುವುದು ಬೇರೆ ನನ್ನದು ಯಾವ ಅನಾಮಧೇಯ ಪುಸ್ತಕವಲ್ಲ ಅನಾಮಧೇಯ ಯಾವುದೂ ಇಲ್ಲ. ಶ್ರೀಮಾನ್ ಸೂರ್ಯ ನಾರಾಯಣರಾವ್ ಅವರು ಈ ನಿರ್ಣಯವನ್ನು ಮುಂದಿನ ಅಧಿವೇಶನದಲ್ಲಿ ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ಆ ರೀತಿ ಮುಂದೆ ತೆಗೆದುಕೊಳ್ಳುವುದು ಯೋಗ್ಯವೇ ಎಂದು ಕೇಳುವುದು ಈಗಿನ ಪ್ರಶ್ನೆ ಈ ರೀತಿ ಈ ಬಗ್ಗೆ ಒಬ್ಬರಿಗೊಬ್ಬರು ಮನ ಬಂದಂತೆ ಮಾತನಾಡಿ ತಾತಮ್ಮ ಮನಸ್ಸನ್ನು ಕೆಡಿಸಿಕೊಳ್ಳುವುದು ಒಳ್ಳೆಯದಲ್ಲ. ಇದಕ್ಕೆ ಅಧ್ಯಕ್ಷರು ರೂಲಿಂಗ್ ಕೊಡಬೇಕು.

ಶ್ರೀ ಎಸ್. ಜಿ. ನರಸಿಂಹೇಗೌಡ.—ಸುಮ್ಮನೆ ಅವರ ನಿರ್ಣಯವನ್ನು ವಾಪಸ್ಸು ತೆಗೆದು ಕೊಳ್ಳಿ ಎಂದು ಹೇಳಿ.

ಉಪಾಧ್ಯಕ್ಷರು.—ಶ್ರೀಮಾನ್ ದೊಡ್ಡಮೇಟಿಯವರು ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡಿದ್ದಾರೆ. ಶ್ರೀಮಾನ್ ಸೂರ್ಯ ನಾರಾಯಣರಾವ್ ಅವರೂ ಸಹ ಒಂದು ಮೋಷನ್ನನ್ನು ತಂದಿದ್ದಾರೆ. ಅದು ಏನೆಂದರೆ ಈ ಚರ್ಚೆಯನ್ನು ಮುಂದೆ ಅಡ್‌ಜರ್ನ್ ಮಾಡ ಬೇಕೆಂಬುದು ಈಗಿರುವ ಪ್ರಶ್ನೆ ಕರ್ನಾಟಕವೆಂದು ಹೆಸರಿಡಬೇಕೇ ಅಥವಾ ಮೈಸೂರ ಎಂಬ ಹೆಸರು ಹಾಗೆಯೇ ಇರಬೇಕೆಂಬುದು ಆ ಪ್ರಶ್ನೆಯ ಮೇರೆ ಮಾತ್ರ ಎಲ್ಲರೂ ಮಾತನಾಡುವುದು ಉತ್ತಮ. ಬೇರೆ ವಿಷಯಗಳ ಬಗ್ಗೆ ಇಲ್ಲ ಮಾತನಾಡುವುದು ಬೇಡ.

† ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಶ್ರೀಮಾನ್ ಸೂರ್ಯನಾರಾಯಣರಾವ್ ಅವರು ತಂದಿರುವ ಮೋಷನ್ ಬಗ್ಗೆ ಎಷ್ಟರ ಮಟ್ಟಿಗೆ ಈ ಸಭೆಯ ಬೆಂಬಲ ಪೂರ್ಣವಾಗಿದೆ. ಸಹಾನುಭೂತಿ ಇದೆಯೆಂದು ಹೇಳುವುದಕ್ಕೋಸ್ಕರ ನಾನು ನಿಂತಿದ್ದೇನೆ. ಶ್ರೀ ವೀರಣ್ಣಗೌಡರು ಈ ವಿಷಯವನ್ನು ಪ್ರಾಸಂಗಿಕವಾಗಿ ಎತ್ತಿದ್ದಕ್ಕೋಸ್ಕರವಾಗಿ ನಾನು ಹೇಳುತ್ತಿದ್ದೇನೆ. ಸದಸ್ಯರು ಅನೇಕರು ಮೈಸೂರು ವಿಶಾಲವಾಗಬೇಕು ಎಂದು ಹೇಳುತ್ತಾರೆ. ಕೇಂದ್ರ ಸರ್ಕಾರದವರು ಎಸ್. ಆರ್. ಸಿ. ಕಮಿಷನ್ ರಿಪೋರ್ಟಿನ ಪ್ರಕಾರ ಎಲ್ಲಾ ಭಾಗಗಳ ಜನರ ಅಭಿಪ್ರಾಯವನ್ನು ಕೋಢೀಕರಿಸಿ ಇದು ಆಗಬೇಕು ಎಂದು ಹೇಳಿದ್ದಾರೆ. ಹಿಂದೆ ಮೈಸೂರು ದೇಶದ ಬಹುತೇಕ ಜನ ಈ ಅಭಿಪ್ರಾಯಕ್ಕೆ ವಿರೋಧವಿತ್ತಿದ್ದರು ಅದರೂ ಕೆಲವರು ಮೈಸೂರನ್ನು ಎರಡು ಭಾಗ ಮಾಡಿ ಅಡ್ಮಿನಿಸ್ಟ್ರೇಟಿವ್ ಯೂನಿಟ್ ಪ್ರತ್ಯೇಕವಾಗಿ ಇರಬೇಕೆಂದಾಗ ನಾವು ಎಲ್ಲಾ ಒಂದಾಗಿರಬೇಕು ಎಂದು ಹೇಳಿದರೂ ನೀವು ಅದಕ್ಕೆ ಒಪ್ಪದೆ ನಿಮ್ಮಿಂದ ಬೇರೆ ಬೇರೆ ರಾಜ್ಯಗಳಲ್ಲಿಯೇ ಇರಬೇಕು ಎಂಬ ಅಭಿಪ್ರಾಯವೇ ಬಂತು. ಅದರಿಂದ ನೀವು ಆಗಲೂ ನಮ್ಮ ಅಭಿಪ್ರಾಯಕ್ಕೆ ಒಮ್ಮತವನ್ನು ಕೊಡಲಿಲ್ಲ. ಶ್ರೀಮಾನ್ ವೀರಣ್ಣಗೌಡರು ಹೇಳಿದ ಮಾತಿನಲ್ಲಿ ಇವರಿಗೆ ಆಗದೇ ಇರತಕ್ಕದ್ದು ಏನೋ ಇರಬಹುದು. ಅಮೃತವನ್ನು ಕಂಡು ಅದನ್ನು ತಿಂದು ವಾಕರಿಕೆ ಮಾಡಿಕೊಳ್ಳುವ ಹಾಗೆ ಇವರು ಹೇಳುತ್ತಿದ್ದಾರೆ. ನನ್ನ ಮಿತ್ರರಾದ ಶ್ರೀಮಾನ್ ದೊಡ್ಡಮೇಟಿಯವರ ಶ್ರೀಮಾನ್ ವೀರಣ್ಣಗೌಡರ ಅಭಿಪ್ರಾಯವನ್ನು ಒಂದು ಕೆಟ್ಟ ಭಾವನೆಯೆಂದು ತಿಳಿಯಬಾರದು ಎಂದು ನಾನು ಸಲಹೆ ಮಾಡುತ್ತೇನೆ.

ಅದಕ್ಕೋಸ್ಕರವಾಗಿ ಈ ಪಲ್ಯೂಟೆಡ್ ವಾಟರ್ ಏನಿದೆ, ಕಲಕಿದ ಕಲುಷಿತ ವಾತಾವರಣ ವೇನಿದೆ, ರಾಜ್ಯ ವಿಶಾಲವಾದ ಮೇರೆ ಈ ಒಂದು ಹೊಸ ಸಮಸ್ಯೆ ಏನು ಉದ್ಭವವಾಗಿದೆ. ಇದು ಎರಾ ಒಂದು ನಮಂಜಸವಾದ ಸೆಟಲ್‌ಮೆಂಟಿಗೆ ಬರಲು; ಅಲ್ಲಿಯವರೆಗೆ ಕಿತ್ತಾಡುವುದು ಬೇಡ. ಅಂಥ ಒಳ್ಳೆಯ ವಾತಾವರಣ ಬಂದಾಗ ರಾಮನನ್ನು ಕೃಷ್ಣ ಎಂದು ಕರೆಯಬಹುದು, ಕೃಷ್ಣನನ್ನು ರಾಮ ಎಂದು ಕರೆಯಬಹುದು, ದೊಡ್ಡಮೇಟಿಯವರನ್ನು ಮುಕ್ಕಣ್ಣಪ್ಪ ಎಂದು ಕರೆಯಬಹುದು ಮುಕ್ಕಣ್ಣಪ್ಪನವರನ್ನು ದೊಡ್ಡಮೇಟಿಯೆಂದು ಕರೆಯಬಹುದು. ಅವನ್ನು ಬಿಟ್ಟು, ನಿಮ್ಮಲ್ಲಿ ಬಾಗಿಗಳನ್ನು ಪಾಸ್ ಕೊಟ್ಟಿದಾರೆ. ನಮ್ಮಲ್ಲಿ ಡಿವಲಪ್‌ಮೆಂಟ್ ಕೆಲಸ ಪಾಸ್ತಿಯಾಗಿಲ್ಲ ಎಂಬುದಾಗಿ ವ್ಯಾಜ್ಯ ತರುವಾಗದು, ಕಿತ್ತಾಡುವಾಗದು. ಈಗ ಹೇಗಿದೆಯೊ, ಹಾಗೇ ಇರಲಿ, ಮೈಸೂರನ್ನು ಕರ್ನಾಟಕವೆಂದು ಕರೆಯು

(ಶ್ರೀ ಜೆ. ಮುಕ್ಕಣ್ಣಪ್ಪ)

ಬೇಕೆಂಬ ಈ ಹುಡ್ಗನ್ನು, ತರೆತೋವನ್ನು ಏಕೆ ಈಗಲೇ ಹಚ್ಚಿಕೊಂಡಿದ್ದೀರಿ? ಹೊಸರಾಜ್ಯ ಬಂದು ಇನ್ನು ಸ್ವಲ್ಪ ದಿನವಾಗಿಲ್ಲ. ಈನ್ನು ಸ್ವಲ್ಪ ಕಾಲ ಕಳೆದಮೇಲೆ, ನಮ್ಮ ಮನೆಗೆ ಹೆಣ್ಣುಕೊಟ್ಟು ನಿಮ್ಮ ಮನೆಯಿಂದ ಹೆಣ್ಣು ತಂದು, ಬಾಂದವ್ಯ ನಮ್ಮುಲ್ಲಿ ನಿಮ್ಮಲ್ಲಿ ಚೆನ್ನಾಗಿ ಬೆಳೆದಮೇಲೆ, ನಮ್ಮ ಮೊಮ್ಮಕ್ಕಳು ಕರ್ನಾಟಕವೆಂದು ಕರೆಯುವುದು ಬೇಡ, ಮೈಸೂರನ್ನುವುದೇ ಚೆನ್ನಾಗಿದೆ ಎಂದು ಹೇಳಬಹುದು. ಕರ್ನಾಟಕವೆಂದು ಕರೆಯುಬೇಕೆಂದರೆ, ಆ ಕನಸನ್ನು ನಮ್ಮ ಮಕ್ಕಳು ಕಾಣುವ ಕಾಲ ಬರಲಿ. ಈಗ ಇರುವ ಪ್ರಶ್ನೆ, ಪಾರ್ಲಮೆಂಟಿನ ಪ್ರಶ್ನೆ ಅಲ್ಲ. ಇದು ಯಾರನ್ನು ಇಕ್ಕಟ್ಟಿಗೆ ಸಿಕ್ಕಿಸುವ ಪ್ರಶ್ನೆ ಅಲ್ಲ. ಆಡಳಿತಪಕ್ಷ ಇದರ ಬಗ್ಗೆ ಒಂದು ಸ್ಟಟರ್‌ಮೆಂಟಿಗೆ ಬಂದಿಲ್ಲ, ರಾಜ್ಯದ ಆಡಳಿತದ ಪಕ್ಷದಲ್ಲಿ ಒಡಕು ಇದ್ದೇ ಇರುತ್ತದೆ. ಇದು ಜನತೆಯ ಪ್ರಶ್ನೆ. ಈ ವಿಷಯದಲ್ಲಿ ಒಂದು ಒಳ್ಳೆಯ ವಾತಾವರಣ ಉಂಟಾಗಲಿ ಎಂಬ ಉದ್ದೇಶದಿಂದ ತಂದಿರುವ ತಿದ್ದುಪಡಿ ಸಾಧುವಾಗಿದೆ. ಈ ಪ್ರಶ್ನೆಯನ್ನು ಸಾಧುವಾಗಿ ಬಿಡಿಸುವುದು ಉತ್ತಮ, ಅದು ಬಿಟ್ಟು ದೇಶದಲ್ಲಿ ಈ ಬಗ್ಗೆ ಏನು ಒಂದು ಅಂದೋಳನವನ್ನು ನಡೆಸುವುದಕ್ಕೆ ದೊಡ್ಡಮೇಟಿಯವರು ಹೊರಟಿದ್ದಾರೆಯೋ, ಅದನ್ನು ಬಿಡಬೇಕೆಂದು ಅವರಲ್ಲಿ ವಿನಂತಿಮಾಡಿಕೊಳ್ಳುತ್ತೇನೆ. ಸೂರ್ಯನಾರಾಯಣ ರಾಯರು ತಂದಿರತಕ್ಕಂಥ ಅಮೆಂಡ್‌ಮೆಂಟನ್ನು ನಾವೆಲ್ಲರೂ ಒಪ್ಪಿಕೊಳ್ಳುತ್ತೇವೆ. ರಾಜ್ಯದಲ್ಲಿ ಒಂದು ಒಳ್ಳೆಯ ಪರಿಸ್ಥಿತಿ, ಒಂದು ಒಳ್ಳೆಯ ವಾತಾವರಣವನ್ನು ಕಲ್ಪಿಸಿದ ಮೇಲೆ, ಈ ಠರಾವನ್ನು ಪರಿಶೀಲಿಸಬೇಕು, ದೊಡ್ಡಮೇಟಿಯವರು ಅತುರ ಅತುರವಾಗಿ ತಮ್ಮ ಇಷ್ಟವನ್ನು ಸಾಧಿಸಬೇಕೆಂದಿದ್ದಾರೆ. ಶ್ರೀನಿವಾಸಶೆಟ್ಟರೂ ಅತುರರಾಗಿದ್ದಾರೆ. ಮೊದಲು ಮಗುವನ್ನು ''ಬಾಬು'' ಎಂದು ಕರೆದು, ಆಮೇಲೆ ''ರಾಮ'' ಎಂದು ಕರೆಯಬಹುದು. ಮೊದಲೇ ಯಾವ ಹೆಸರನ್ನು ಕರೆಯಬೇಕೆಂಬ ವಿಚಾರವಲ್ಲಿ ಕತ್ತಾಡುವುದು ಬೇಡ. ಮನಸ್ಸು ವಿಶಾಲವಾಗಲಿ. ದೇಶದ ಸಮಸ್ಯೆಗಳನ್ನು, ತೊಡಕುಗಳನ್ನು ಬಗೆಹರಿಸಿಕೊಳ್ಳೋಣ. ಮೊದಲು ಈ ಕಡೆಗೆ ಗಮನ ಕೊಡಬೇಕು. ಕೆ.ವಿ. ಪುಟ್ಟಪ್ಪನವರು ಹೇಳಿದ್ದರೆ ಒಪ್ಪಿಕೊಳ್ಳಿ ಎನ್ನುತ್ತಾರೆ; ಪಂಪ. ಹೇಳಿದ್ದಾನೆ ಒಪ್ಪಿಕೊಳ್ಳಿ ಎನ್ನುತ್ತಾರೆ ಪುಟ್ಟಪ್ಪ, ಪಂಪ ಹೇಳಿದ್ದನ್ನು ನಾವು ಏಕೆ ಒಪ್ಪಿಕೊಳ್ಳಬೇಕು? ನಾವು ಹೇಳಿದ್ದನ್ನು ಏಕೆ ಒಪ್ಪಿಕೊಳ್ಳಬಾರದು? ಪಂಪ, ರನ್ನ ಹೇಳಿದ್ದಾರೆ. ಆದ್ದರಿಂದ ಆಗಿಬಿಡಬೇಕೆಂದು ಹೇಳುವುದು ಅಲ್ಲ. ಶ್ರೀಮಾನ್ ದೊಡ್ಡಮೇಟಿಯವರು ಸೂರ್ಯನಾರಾಯಣ ರಾಯರು ತಂದಿರತಕ್ಕಂಥ ತಿದ್ದುಪಡಿಯನ್ನು ಒಪ್ಪಿಕೊಳ್ಳಲಿ. ಅವರು ಒಂದು ಪುಸ್ತಕವನ್ನು ಹಂಚಿದ್ದರಲ್ಲ, ಅಂಥ ಪುಸ್ತಕವನ್ನು ಹಂಚಿದಾದಮೇಲಿತ್ತು. ಮೈಸೂರು ಅನಾಮಧೇಯ ರಾಜ್ಯವಲ್ಲ. ಇದು ನೋಡಿ ಸ್ವಾಮಿ! ನಮ್ಮ ರಾಜ್ಯಕ್ಕೆ ಹೆಸರೇ ಇಲ್ಲವೇ! ಎಸ್. ಆರ್. ಸಿ. ರಿಪೋರ್ಟಿನಲ್ಲಿ ವಿಶಾಲ ಮೈಸೂರು ಎಂದು ಹೇಳಿವ್ವಾರೆ ಮೈಸೂರು ಸರ್ಕಾರವಿದೆ.

ಶ್ರೀ ಎ. ಜೆ. ದೊಡ್ಡಮೇಟಿ.—ಎಸ್. ಆರ್. ಸಿ. ರಿಪೋರ್ಟ್‌ನಲ್ಲಿರುವುದನ್ನು ನಾನೂ ಹೇಳಬಲ್ಲೆ. ಈಗ ಆ ಪ್ರಶ್ನೆ ನಮ್ಮ ಮುಂದಿಲ್ಲ. ಈಗ ಈ ಠರಾವು ಜುಲೈ ತಿರೆಗೆ ಮುಂದಕ್ಕೆ ಹೋಗಬೇಕೆ ಬೇಡವೆ ಎಂಬುದು ಪ್ರಶ್ನೆ ಹೋಗಬೇಕೆಂದು ನಾವೂ ಒಪ್ಪಿದ್ದೇವೆ. ನೀವೂ ಒಪ್ಪಿದ್ದೀರಿ.

†ಶ್ರೀ ಸಿ. ಕೆ. ರಾಜಯ್ಯಶೆಟ್ಟಿ (ಚಿಕ್ಕನಾಯಕನಹಳ್ಳಿ).—ಈ ಒಂದು ರೆವಲ್ಯೂಶನ್, ಎಂದು. ಕಾನ್‌ಸ್ಟಿಟ್ಯೂಶನ್ ಆಯಿತೇ, ಅಂದಿನಿಂದ ಇಲ್ಲಿಯವರೆಗೆ, ಈ ಸಭೆಯಲ್ಲಿ ಕೊನೆಯ ಪಕ್ಷ 10-12 ದಿವಸಗಳಾದರೂ ವಿಮರ್ಶೆ ಯಾಗಿದೆಯೆಂದರೆ ಅತಿಶಯೋಕ್ತಿಯಲ್ಲ. ಹಿಂದೆ ಈ ರೆವಲ್ಯೂಶನ್ ಚರ್ಚೆಯಾದ ನಂತರ ರೆವಿನ್ಯೂ ಮಿನಿಸ್ಟರ್ ಕಡಿದಾಳ್ ಮಂಜಪ್ಪನವರು ಒಂದು ಹೇಳಿಕೆಯಿತ್ತು, ಹೆಸರು ಬದಲಾಯಿಸುವ ಕಾಲ ಇನ್ನೂ ಬಂದಿಲ್ಲ. ಈ ಪ್ರಶ್ನೆ ಅನಿರ್ದಿಷ್ಟ ಕಾಲ ಮುಂದಕ್ಕೆ ಹೋಗುವುದು ಒಳ್ಳೆಯದುಎಂದು ಹೇಳಿದರು. ಈಗ ಇನ್ನು ಎರಡು ತಿಂಗಳಾದ ಮೇಲೆ ಇದನ್ನು ಚರ್ಚೆ ಮಾಡೋಣವೆಂಬ ತಿದ್ದುಪಡಿ ಇದೆ. ವೀರಣಗೌಡರು ಮಾಡಿದ ಭಾಷಣದಲ್ಲಿ, ಇನ್ನೂ ಹೆಸರು ಬದಲಾಯಿಸುವಂಥ ಕಾಲ ಬಂದಿಲ್ಲ, ನಮ್ಮ ಮನಸ್ಸು ಪರಿವರ್ತನೆಯಾಗಿಲ್ಲ. ಎಲ್ಲರೂ ಒಪ್ಪುವ

ರೀತಿಯಲ್ಲಿ ತೀರ್ಮಾನ ತೆಗೆದು ಕೊಳ್ಳಲು ಕಾಲಬೇಕೆಂದರು. ಪಾರ್ಟಿ ಪಾರ್ಟಿಗಳಲ್ಲಿ ದ್ವೇಷ ವ್ಯಕ್ತಿ, ವ್ಯಕ್ತಿಗಳಲ್ಲಿ ಸಂತಯ ಇಂದು ನಮ್ಮ ಮುಂದಿದೆ. ಹೀಗಿರುವಾಗ ಐದು ವರ್ಷಗಳಿಂದ, ಈ ಒಂದು ರೆಸಲೂಶನ್ನಿಗೆ ಇಷ್ಟು ಮಹತ್ವ ಕೊಡಬೇಕಾದ ಅಗತ್ಯವೇನಿತ್ತು? ಈ ಹೊಸ ರಾಜ್ಯಕ್ಕೆ ಸಂಬಂಧಪಟ್ಟ ಅನೇಕ ಮುಖ್ಯ ಸಮಸ್ಯೆ ರೆಸಲ್ಯೂಶನ್ನಿಗಳಿಗೆ ತಕ್ಕ ಮಹತ್ವ ಕೊಡದೆ, ಇದಕ್ಕೆ ಜಾಸ್ತಿ ಪ್ರಾಶಸ್ತ್ಯ ಕೊಟ್ಟಿದ್ದೇವೆಂದು ಹೇಳಿದರೆ ಖಂಡಿತವಾಗಿಯೂ ತಪ್ಪಾಗಲಾರದು. ಇಡೀ ಭರತ ಖಂಡದಲ್ಲಿಯೇ ಆಗಲಿ, ನಮ್ಮ ನೆರೆ ರಾಷ್ಟ್ರಗಳಲ್ಲಿಯೇ ಆಗಲಿ, ನಮ್ಮಲ್ಲಿ ನಾನ್-ಅಫಿಶಿಯಲ್ ಡೇಗಳಲ್ಲಿ, ಈ ಒಂದು ಹೆಸರಿಗೋಸ್ಕರ ನಿರ್ಣಯಗಳನ್ನು ತಂದು ಕಾಲ ಕಳೆದಿರುವಷ್ಟು ಎಲ್ಲಿಯೂ ಕಳೆದಿಲ್ಲವೆಂದು ಹೇಳಿದರೆ, ಇದು ಅವಮಾನಕರದ ಸಂಗತಿ. ಇವತ್ತಿನ ದಿವಸ ಈ ಒಂದು ಹೆಸರು, ಒಂದು ಪ್ರಾಂತ್ಯ, ಒಂದು ಭಾಷೆ ವಿಚಾರದಲ್ಲಿ ಕೆಲವರು ತರೆಗೆ ಹಚ್ಚು ಹಚ್ಚಿಸಿಕೊಂಡು, ದೇಶದ ಪ್ರಗತಿಯನ್ನು ಕುಂಠಿತ ಮಾಡಿದ್ದಾರೆ. ಇವತ್ತಿನ ದಿವಸ ನಾವು ಮದ್ರಾಸ್ ಮತ್ತು ಆಂಧ್ರ ಪ್ರಾಂತ್ಯಗಳೊಂದಿಗೆ ಹೋಲಿಸಿಕೊಂಡರೆ, ನಾವು ಅನೇಕ ರೀತಿಯಲ್ಲಿ ಹಿಂದುಳಿದಿದ್ದೇವೆ. ದೇಶದ ಸಮಸ್ಯೆಗಳಿಗೆ ಸಂಬಂಧಪಟ್ಟ ಅನೇಕ ರೆಸಲ್ಯೂಶನ್ನುಗಳನ್ನು ಬಿಟ್ಟು, ಕರ್ನಾಟಕ ಆಗಬೇಕು, ಮೈಸೂರು ಹೋಗಬೇಕೆಂಬ ಒಂದು ಸಮಸ್ಯೆಯನ್ನು ಮುಂದಕ್ಕೆ ಇಟ್ಟುಕೊಂಡು, ತರೆಗೆ ಹಚ್ಚಿಕೊಂಡು, ದೇಶದ ಸಮಸ್ಯೆಗಳನ್ನು ಮರೆತು ಕೆಲಸ ಮಾಡುತ್ತಿದ್ದಾರೆ. ಈ ಐದು ವರ್ಷಗಳ ಅವಧಿಯಲ್ಲಿ ಇದಕ್ಕೋಸ್ಕರ ಎಷ್ಟು ಕಾಲವನ್ನು ಕಳೆದಿದ್ದೇವೆ, ನಮ್ಮ ದೇಶದ ಪ್ರಗತಿಗೆ, ಬೆಳವಣಿಗೆಗೆ ಲಕ್ಷ ವಿನಿಯೋಗ ಮಾಡಿದ್ದೇವೆಂದು ಲೆಕ್ಕ ಹಾಕಿದ ಪಕ್ಷದಲ್ಲಿ ತುಂಬ ಅನ್ಯಾಯ ಮಾಡಿದ್ದೇವೆ. ಈ ರೋಗವನ್ನು ಮನಸ್ಸಿನಲ್ಲಿಟ್ಟುಕೊಂಡು, ಅದು ಇನ್ನು ಎರಡು ತಿಂಗಳಿಗೆ ಉದ್ಭವವಾಗುವಂತೆ ಮಾಡುವುದು ಬೇಡ. ಈ ಕರ್ನಾಟಕ ನಿರ್ಣಯ ಚರ್ಚೆ ಇನ್ನೆರಡು ತಿಂಗಳು ಮುಂದಕ್ಕೆ ಹಾಕುವುದು ಬೇಡ: ಮುಂದಕ್ಕೆ ಹಾಕಿದರೆ ಒಂದು ವರ್ಷ ಹಾಕಿ; ಮುಂದಿನ ಎರೆಕ್ಷನ್ ಆಗುವವರೆಗೆ ಹಾಕಿ; ಯಾವುದಾದರೂ ಒಂದು ನಿರ್ದಿಷ್ಟವಾದ, ದೀರ್ಘವಾದ ಕಾಲಕ್ಕೆ ಮುಂದಕ್ಕೆ ಹಾಕುವುದು ಸೂಕ್ತ. ಇಲ್ಲದಿದ್ದ ಪಕ್ಷದಲ್ಲಿ ಬೇಗ ಓಟು ತೆಗೆದುಕೊಳ್ಳಿ, ಇಲ್ಲವೇ ರಾಟರಿ ಹಾಕಬಿಡೋಣ, ವ್ಯಾಜ್ಯಬೇಡ. ಯಾವುದಾರೂ ತೀರ್ಮಾನಕ್ಕೆ ಬರುವುದು ಉತ್ತಮ. ವೀರಣ್ಣ ಗಾಡದ ಭಾಷಣ ಮಾಡತಾ,.ನೀರಾವರಿಯೆಳಗೆ ನಾವು ಆರು ಪರ್ಸೆಂಟಿನಲ್ಲಿ ಇದ್ದೇವೆ. ಹೈಡೋ್ರ ಎಲೆಕ್ಟ್ರಿಕ್ ಮತ್ತು ಕೈಗಾರಿಕೆ ಯೋಜನೆಗಳಲ್ಲಿ ಎಷ್ಟು ಹಿಂದಿದ್ದೇವೆಂದು ವಿವರಿಸಿದರು. ನಾವು ಮಾಡಬೇಕಾದ ಕೆಲಸ ಅಗಾಧವಾಗಿದೆ. ನಾವು 208 ಜನ ಅಸೆಂಬ್ಲಿ ಮೆಂಬರುಗಳು 65 ದಿನಗಳು ಕೆಲಸ ಮಾಡಿದರೂ, ದಿನಗಳು ಸಾಲದು. ಈ ಒಂದು ಹೆಸರಿಗೋಸ್ಕರ ನಾವು ತರೆ ಕೆಡಿಸಿಕೊಂಡು, ಕಾಲ ವ್ಯರ್ಥ ಮಾಡಿಸುವುದು ತರೆ ತಗ್ಗಿಸಬೇಕಾದ ವಿಷಯ. ನಾನು ಸೂರ್ಯ ನಾರಾಯಣರಾಯರು ತಂದಿರುವ ಸೂಚನೆಯನ್ನು ವಿರೋಧಿಸುತ್ತೇನೆ. ಈ ನಿರ್ಣಯದ ವಿಷಯದಲ್ಲಿ ಈಗಲೇ ಒಂದು ತೀರ್ಮಾನಕ್ಕೆ ಬರೋಣ, ಇಲ್ಲವೇ ಚುನಾವಣೆಯಾಗುವವರೆಗೆ ಮುಂದಕ್ಕೆ ಹಾಕೋಣ, ಈ ಎರಡರಲ್ಲಿ ಏನಾದೂ ಮಾಡುವುದು ಸೂಕ್ತವಾದ ತೀರ್ಮಾನ. ಈ ನಿರ್ಣಯದ ಮೇಲಿನ ಚರ್ಚೆಯನ್ನು 2–3 ತಿಂಗಳು ಮುಂದಕ್ಕೆ ಹಾಕುವುದರಿಂದ ಏನೂ ಪ್ರಯೋಜನವಿಲ್ಲ. ಕಡಿದಾಳ್ ಮಂಜಪ್ಪನವರು ರಾಜ್ಯದ ಹೆಸರನ್ನು ಬದಲಾಯಿಸುವ ಕಾಲ ಇನ್ನೂ ಬಂದಿಲ್ಲ, ಕಾಲ ಪಕ್ವವಾಗಿಲ್ಲವೆಂದು ಹೇಳಿದರು. ಹೀಗೆ ವ್ಯರ್ಥಾ ಮುಂದೆ ನಮ್ಮ ಮುಂದಿರುವ 4–6 ನಾನ್ ಅಫಿಶಿಯಲ್ ದಿನಗಳನ್ನು—ಪವಿತ್ರ ದಿನಗಳನ್ನು, ಖರ್ಚು ಮಾಡುವುದು ಶುದ್ಧ ಅನ್ಯಾಯ. ಅದಕ್ಕೋಸ್ಕರ ಈ ನಿರ್ಣಯವನ್ನು ಅನಿರ್ದಿಷ್ಟ ಕಾಲ ಮುಂದುವರಿಸುವುದಕ್ಕೆ ಹೋಗದೆ ಇದನ್ನು ಈಗಲೇ ಓಟಿಗೆ ಹಾಕಿ ತೀರ್ಮಾನ ತೆಗೆದುಕೊಳ್ಳುವುದು ಒಳ್ಳೆಯದೆಂದು ಹೇಳುತ್ತೇನೆ.

Sri B. R. SUNTHANKAR.—Spoke in Marathi.

Sri G. VENKATAI GOWDA.—I want to know whether the Hon'ble Member is speaking on the merits of the resolution or on the motion just now moved.

Sri B. R. SUNTHANKAR.—I am speaking on the motion and not on the resolution.

†Sri C. M. ARUMUGHAM.—Mr. Speaker, Sir, are you able to follow the speech? If it is for the Speaker to find out whether the Hon'ble Member is speaking on the merits of the resolution or on the motion to postpone the consideration of the resolution. I want to know whether you are able to follow the speech.

(Laughter)

Mr. DEPUTY SPEAKER.—The Hon'ble Member may continue his speech after tea.

The House will now rise and meet after half-an-hour.

The House adjourned for recess at Three of the Clock and reassembled at Thirty Minutes past Three of the Clock.

[Mr. DEPUTY SPEAKER in the Chair]

[Sri B. R. SUNTHANKAR *Concluded his speech in Marathi*]

Mr. DEPUTY SPEAKER.—The question is :

"That the debate on the resolution moved by Sri Basangowda be adjourned to the next session".

The motion was adopted

POINT OF ORDER.

Sri V. SRINIVASA SHETTY.—Sir, I rise to a small point of order. The Hon'ble Chief Minister quoted the Constitution with regard to the Speaker not having authorised the Deputy Speaker to act for him. Let us clear the point. We sincerely feel that there is something wrong here. Rule 11 of the Rules of procedure says.

> "When by reason of illness or absence from India or for any other sufficient cause, the Speaker it unable to exercise any of his powers or discharge any of his functions, he may by order in writi g delegate to the Deputy Speaker such of his powers and functions as he may deem fit. He may likewise revoke any such delegation."

The rule is quite clear. There are two situations in this case. One is the Speaker being in India or within the State and unable to attend any sittings of the House and the other is the Speaker being ill and physically incapacitated from attending the House or going out of India